ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ ಕಡೂರು

O.S. No.59/2018. DW-1

ದಿನಾಂಕ **02.12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ.ಸಿ ಎಂ ಜಿ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದುಕೊಂಡಿರುತ್ತೇನೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಕೊಳವೆ ಬಾವಿ ತೆಗೆಯಲು ಮಾಡಿದ ಕಂಟ್ರ್ಯಾಕ್ಟ್‌ನ ಮೇಲುರುಜು ಪ್ರತಿ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು.

ಕಡೂರು ಪೊಲೀಸ್ ಠಾಣೆಯವರು ನೀಡಿದ ಸ್ವೀಕೃತಿ ಪ್ರತಿ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು.

ಪಟ್ಟಣಗೆರೆ ಗ್ರಾಮಪಂಚಾಯಿತಿಯವರು ತಹಶೀಲ್ದಾರ್ ರವರಿಗೆ ಕಳುಹಿಸಿದ ಪತ್ರ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು.

ಪಟ್ಟಣಗೆರೆ ಗ್ರಾಮ ಪಂಚಾಯಿತಿಯವರು ಕಡೂರು ಪೊಲೀಸ್ ಠಾಣೆಗೆ ನೀಡಿದ ದೂರು ಅರ್ಜಿ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು.

ಪಟ್ಟಣಗೆರೆ ಪಂಚಾಯಿತಿಯ ಸಾರ್ವಜನಿಕರು ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ ಎಂದು ಗ್ರಾಮಪಂಚಾಯಿತಿಗೆ ನೀಡಿದ ಅರ್ಜಿಯನ್ನು ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು.

ಗ್ರಾಮಪಂಚಾಯಿತಿಯಿಂದ ಕೊಳವೆ ಬಾವಿ ತೆಗೆಯಲು ಸ್ಥಳ ತನಿಖೆ ಮಾಡಿದ ಸಂಬಂಧ ಪೋಟೋಗಳನ್ನು ಹಾಜರುಪಡಿಸಿರುತ್ತೇನೆ, ಸದರಿ ಪೋಟೋಗಳನ್ನು ನಿಡಿ-6 ರಿಂದ 11 ಎಂದು ಗುರುತಿಸಲಾಯಿತು. ನಿಪಿ 6 ರಿಂದ 11 ರ ಸಂಬಂಧದ ಸಿ.ಡಿ. ಹಾಜರುಪಡಿಸಿರುತ್ತೇನೆ, ಸದರಿ ಸಿ.ಡಿ.ಯನ್ನು ನಿಡಿ-12 ಎಂದು ಗುರುತಿಸಲಾಯಿತು.

ಆ ದಿನ ತಹಶೀಲ್ದಾರ್ ರವರ ಕಛೇರಿಯಲ್ಲಿ ಪ್ರತಿಭಟನೆಯಾದ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟಣೆ ಗೊಂಡಿರುತ್ತದೆ, ಸದರಿ ಪತ್ರಿಕೆ ಹಾಜರುಪಡಿಸಿರುತ್ತೇನೆ, ಸದರಿ ಪತ್ರಿಕೆ ನಿಡಿ-13 ಎಂದು ಗುರುತಿಸಲಾಯಿತು.

ಕೊಳವೆ ಬಾವಿ ತೆಗೆಸಿದ ಜಮೀನಿನ ಅಂದರೆ ಪಟ್ಟಣಗೆರೆ ಗ್ರಾಮದ ಸರ್ವೆ ನಂ.7/3 ರ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-14 ಎಂದು ಗುರುತಿಸಲಾಯಿತು.

ಸಹಾಯಕ ಕಾರ್ಯಪಾಲಕ ಅಭಿಯಂತರರು  ಪಟ್ಟಣಗೆರೆ ಗ್ರಾಮದ ಉದ್ದ-ಅಗಲದ ವಿಸ್ತೀರ್ಣ ಕೇಳಿ ಕಳುಹಿಸಿದ ಅರ್ಜಿಯ ಪ್ರತಿ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-15 ಎಂದು ಗುರುತಿಸಲಾಯಿತು.

ಪಟ್ಟಣಗೆರೆ ಗ್ರಾಮದ ಗ್ರಾಮ ನಕಾಶೆಯ ದೃಢೀಕೃತ ಪ್ರತಿ (3 ಹಾಳೆಗಳು) ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-16 ಎಂದು ಗುರುತಿಸಲಾಯಿತು.

ಪಟ್ಟಣಗೆರೆ ರಸ್ತೆ ಅಭಿವೃದ್ಧಿ ಪಡಿಸಿದ ಬಾಬ್ತು ಖರ್ಚಿನ ಸ್ಟೇಟ್‌ಮೆಂಟ್ ನ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಡಿ-17 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ವಾದಿ ಮತ್ತು ವಾದಿಪರ ವಕೀಲರು ಗೈರು ಹಾಜರು ಇರುತ್ತಾರೆ. ಆದ್ದರಿಂದ ಪಾಟೀ ಸವಾಲು ಮಾಡಲು ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.